ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಸಂಪುಟ : 5 । ಸಂಚಿಕೆ : 9 । ಸೆಪ್ಟೆಂಬರ್ - 2023 । ಪುಟಗಳು : 20 । ಬೆಲೆ : 25/-



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು





ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

ಸಮಸ್ತ ಸಹಕಾರಿ ಬಂಧುಗಳಿಗೆ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಷಯಗಳು
ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತಮಂಡಳಿ ನಿರ್ದೇಶಕರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಪತ್ತಿನ ಸಹಕಾರ ಮಹಾಮಂಡಳ ವಾರ್ಷಿಕ ಮಹಾಸಭೆ






ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಸಿ.ಎಂ.ಮಾರೇಗೌಡರವರು ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು ಇದರ ಖಜಾಂಚಿಯಾಗಿ ಆಯ್ಕೆಯಾಗಿದ್ದು ಆಡಳಿತಮಂಡಳಿ ಸದಸ್ಯರು ಶ್ರೀಯುತರನ್ನು ಸನ್ಮಾನಿಸಿ ಗೌರವಿಸಿದರು.



ಜನಹಿತ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ ಬೆಂಗಳೂರು ಇದರ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರು ಆದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಡಿ. ದೊಡ್ಡೇಗೌಡರವರು ಆಯ್ಕೆಯಾಗಿರುತ್ತಾರೆ.

## ಆಯ್ಕೆ





ತುಮಕೂರು ಬಸವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಟಿ.ಸಿ. ಓಹಿಲೇಶ್ವರರವರು, ಉಪಾಧ್ಯಕ್ಷರಾಗಿ ಶ್ರೀ ಎಂ.ಎನ್. ಲೋಕೇಶ್‌ರವರು ಆಯ್ಕೆ ಯಾಗಿರುತ್ತಾರೆ.

## ಆಯ್ಕೆ



ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಜಿ. ಮಲ್ಲಿಕಾರ್ಜುನಯ್ಯರವರು ಬಸವೇಶ್ವರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., ತುಮಕೂರು ಇದರ ನಿರ್ದೇಶಕರಾಗಿ ಆಯ್ಕೆ.ಯಾಗಿರುತ್ತಾರೆ

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org,

ವೆಬ್‌ಸೈಟ್ : www.ksccsf.org

### ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

# ಸಹಕಾರ ಅಭಿವೃದ್ಧಿಗೆ ನಿರಂತರ ಚಿಂತನ-ಮಂತನ ಅಗತ್ಯ

ಭಾರತ ದೇಶದ ಸಹಕಾರ ಚಳವಳಿಯ ಬೆಳವಣಿಗೆಗೆ ಕರ್ನಾಟಕ ರಾಜ್ಯದ ಕೊಡುಗೆ ಮಹತ್ತರವಾದುದು. 1905ರಲ್ಲಿ ಕಣಗಿನಹಾಳದ ಕೃಷಿ ಪತ್ತಿನ ಸಹಕಾರ ಸಂಘದಿಂದ ಪ್ರಾರಂಭವಾದ ಈ ಆಂದೋಲನ ಇಂದು ಬೃಹದಾಕಾರವಾಗಿ ಬೆಳೆದು ದೇಶದಲ್ಲಿ 8.50 ಲಕ್ಷಕ್ಕೂ ಅಧಿಕ ಸಹಕಾರ ಸಂಘಗಳನ್ನು ಹೊಂದಿರುವುದು. 30 ಕೋಟಿಗೂ ಅಧಿಕ ಸದಸ್ಯ ಬಳಗವನ್ನು ಹೊಂದಿರುವುದು ಸರಿಯಷ್ಟೆ.

ಭಾರತವು ಎಲ್ಲಾ ವಲಯಗಳಲ್ಲಿ ಅಭಿವೃದ್ಧಿ ಸಾಧಿಸುತ್ತಿದೆ. ಸಹಕಾರ ವಲಯ ವಿಶೇಷವಾಗಿ ಕೃಷಿ ಹೈನುಗಾರಿಕೆಗೆ ಪತ್ತು, ಬ್ಯಾಂಕಿಂಗ್‌ಗೆ ಒತ್ತು ನೀಡಿದೆಯಾದರೂ ಉಳಿದ ವಲಯಗಳ ಬೆಳವಣಿಗೆ ಬಗ್ಗೆ ಗಮನಹರಿಸದೇ ಇರುವುದರ ಬಗ್ಗೆ ಸಹಕಾರಿಗಳಾದ ನಾವೆಲ್ಲರೂ ಆತ್ಮಾವಲೋಕನ ನಡೆಸಬೇಕಾಗಿದೆ.

ಯುವಜನರು, ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ವಹಿವಾಟು ಹೆಚ್ಚುವುದಲ್ಲದೇ ಹೊಸ ವಲಯಗಳ ಸೃಷ್ಟಿ, ಸೇವೆಗಳ ವಿಸ್ತರಣೆ, ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ಆಯಾಮಗಳಲ್ಲಿ ಸಹಕಾರ ವಲಯವನ್ನು ಬೆಳೆಸಲು ಹಿರಿಯ ಸಹಕಾರಿಗಳ ಮಾರ್ಗದರ್ಶನವೂ ಮುಖ್ಯವಾಗಿರುತ್ತದೆ.

ಕೇಂದ್ರ, ರಾಜ್ಯ ಸರ್ಕಾರಗಳು ಕೂಡ ಸಹಕಾರ ವಲಯದ ಬೆಳವಣಿಗೆಗೆ ಒತ್ತು ನೀಡುತ್ತಿವೆಯಾದರೂ ಸಹಕಾರಿಗಳ ದೂರದೃಷ್ಟಿ ಚಿಂತನೆಗಳ ಮೂಲಕ ಸಹಕಾರ ವಲಯವನ್ನು ಎಲ್ಲಾ ಸ್ತರಗಳಲ್ಲಿ ಮುನ್ನಡೆಸಲು ಯೋಜನೆಗಳನ್ನು ರೂಪಿಸುವುದು ಅಗತ್ಯವಾಗಿದೆ.

ಪ್ರತಿವರ್ಷ ಸೆಪ್ಟಂಬರ್ ಮಾಹೆಯ 25ನೇ ತಾರೀಖಿನ ಒಳಗಾಗಿ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳ ವಾರ್ಷಿಕ ಮಹಾಸಭೆಗಳು ನಡೆಯುತ್ತಿದ್ದು ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭೆಗಳಲ್ಲಿ ಪಾಲ್ಗೊಂಡು ಸಂಘಗಳ ಬೆಳವಣಿಗೆಗೆ ಮಾರ್ಗದರ್ಶಕರಾಗುವುದರ ಜೊತೆಗೆ ಕಡ್ಡಾಯವಾಗಿ ಸಂಘಗಳಲ್ಲಿ ವ್ಯವಹರಿಸಬೇಕಾದುದು ಅವರ ಜವಾಬ್ದಾರಿಯೂ ಆಗಿದೆ.

ಎಲ್ಲಾ ಸಹಕಾರ ಬಂಧುಗಳಿಗೆ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಷಯಗಳು.

ಯುವಜನರು, ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ವಹಿವಾಟು ಹೆಚ್ಚುವುದಲ್ಲದೇ ಹೊಸ ವಲಯಗಳ ಸೃಷ್ಟಿ, ಸೇವೆಗಳ ವಿಸ್ತರಣೆ, ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ಆಯಾಮಗಳಲ್ಲಿ ಸಹಕಾರ ವಲಯವನ್ನು ಬೆಳೆಸಲು ಹಿರಿಯ ಸಹಕಾರಿಗಳ ಮಾರ್ಗದರ್ಶನವೂ ಮುಖ್ಯವಾಗಿರುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಆಯ್ಕೆ ಪದಗ್ರಹಣ ಸ್ವೀಕಾರ



ಗೋಕಾಕ ನಗರದ ಪ್ರತಿಷ್ಠಿತ ಸಹಕಾರ ಸಂಸ್ಥೆಗಳಲ್ಲಿ ಒಂದಾದ ಶ್ರೀ ಜಗದ್ಗುರು ಪಂಚಾಚಾರ್ಯ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಗೋಕಾಕ ಇದರ 2023–2028ರ ವರೆಗಿನ 5 ವರ್ಷದ ಅವಧಿಗೆ ಪದಾಧಿಕಾರಿಗಳ ಆಯ್ಕೆ ಪದಗ್ರಹಣವನ್ನು ಕರ್ನಾಟಕ ರಾಜ್ಯದ ವಿಧಾನಸಭೆಯಲ್ಲಿ ನಡೆಯುವ ರೀತಿಯಲ್ಲಿ ಸಂವಿಧಾನಬದ್ದವಾಗಿ ಪ್ರಮಾಣವಚನವನ್ನು ಹಿರಿಯ ಸಹಕಾರಿಗಳಾದ ಶ್ರೀ ಬಿ.ಎಂ. ಕಂಬಿಯವರು ಭೋಧಿಸಿದರು ಹಾಗೂ ಇತರ ಸಹಕಾರಿ ಕ್ಷೇತ್ರಕ್ಕೆ ಇದು ಒಂದು ಮಾದರಿ. ಹೀಗೆ ಎಲ್ಲಾ ಸಂಘ ಸಂಸ್ಥೆಗಳು ಅಳವಡಿಸಿಕೊಳ್ಳಲು ನೆರೆದ ಸದಸ್ಯರು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾಗಿ ಶ್ರೀ ಮಹಾಂತಯ್ಯ ಗಂಗಯ್ಯ ಹಿರೇಮಠ ಹಾಗೂ ಉಪಾಧ್ಯಕ್ಷರಾಗಿ ಶ್ರೀ ರವೀಂದ್ರ ಪ್ರಭುದೇವ ಹಿರೇಮಠ ಇವರನ್ನು ಚುನಾವಣಾ ಅಧಿಕಾರಿಗಳಾದ ಶ್ರೀ ಮಹೇಶ್ ಶೇಡಬಾಳ ಇವರು ಅವಿರೋಧ ಆಯ್ಕೆ ಆಗಿದ್ದಾರೆ ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ಆಡಳಿತಮಂಡಲಿಯ ನಿರ್ದೇಶಕರಾದ ಶ್ರೀ ಸಂಜಯ ಪಿ ಹೊಸಮಠ, ಶ್ರೀ ಸೋಮಶೇಖರ ಕುಮಾರಮಠ, ಶ್ರೀ ವಿರೂಪಾಕ್ಷಯ್ಯ ಮುನ್ನೋಳಿಮಠ, ಶ್ರೀ ಮಲ್ಲಿಕಾರ್ಜುನ ಸುಬ್ಬಾಪುರಮಠ, ಶ್ರೀ ಬಸವರಾಜ ಕಡಪಟ್ಟಿ, ಶ್ರೀ ರವೀಂದ್ರ ಬಸ್ತವಾಡಕರ, ಶ್ರೀ ದುಂಡಯ್ಯ ಹಿರೇಮಠ, ಶ್ರೀ ಸಿದ್ದಪ್ಪ ಹುಚ್ಚರಾಮಗೋಳ, ಶ್ರೀಮತಿ ಸುವರ್ಣಾ ಪೂಜಾರಿ, ಶ್ರೀಮತಿ ಈರವ್ವ ಹಿರೇಮಠ ಇವರೆಲ್ಲರೂ ಪ್ರತಿಜ್ಞಾ ವಿಧಿಯೊಂದಿಗೆ ಪ್ರಮಾಣವಚನ ಸ್ವೀಕಾರ ಮಾಡಿದರು ಹಾಗೂ ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕ ಮಾಜಿ ಅಧ್ಯಕ್ಷರು ಹಾಗೂ ಮಾಜಿ ನಿರ್ದೇಶಕರಾದ ಶ್ರೀ ಬಾಳಯ್ಯ ಕಂಬಿ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕಾಡಯ್ಯಾ ಸಂಬಾಳ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

**ಸುಭಾಷಿತ :** ಎಲ್ಲಾ ಧರ್ಮಗಳು ಮನುಷ್ಯ ಧರ್ಮವೇ ಶ್ರೇಷ್ಠ ಎಂದಿವೆ. ಅಥೈಸಿಕೊಳ್ಳುವಲ್ಲಿ ಸೋತ ನಾವು ನಮ್ಮದೇ ಶ್ರೇಷ್ಠ ಎನ್ನುತ್ತೇವೆ. – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು
ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,
ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು
ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ,
ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ
ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.

# 19ನೇ ವಾರ್ಷಿಕ ಸಾಮಾನ್ಯ ಸಭೆ

## ಸಹಕಾರ ಚಳವಳಿ ಬಲಪಡಿಸಲು ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರ ಸಲಹೆ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು ಇದರ 2022-23ನೇ ಸಾಲಿನ 19ನೇ ವಾರ್ಷಿಕ ಸಾಮಾನ್ಯ ಸಭೆಯನ್ನು, ದಿನಾಂಕ : 30.08.2023 ಬುಧವಾರ ಬೆಳಗ್ಗೆ 11.00 ಘಂಟೆಗೆ ಕೆ.ಇ.ಬಿ ಇಂಜಿನಿಯರ್ಸ್ ಅಸೋಸಿಯೇಷನ್, ಸರ್. ಎಂ.ವಿಶ್ವೇಶ್ವರಯ್ಯ ಸಭಾಂಗಣ, ಸಿಲ್ವರ್ ಜುಬಿಲಿ ಬಿಲ್ಡಿಂಗ್, ನಂ.28, ರೇಸ್‌ಕೋರ್ಸ್ ಕ್ರಾಸ್ ರಸ್ತೆ, ಆನಂದರಾವ್ ಸರ್ಕಲ್ ಹತ್ತಿರ, ಬೆಂಗಳೂರು. ಇಲ್ಲಿ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ.ದೇವೇಗೌಡ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಹಾಮಂಡಳದ ಸದಸ್ಯ ಸಂಘಗಳ ಪ್ರತಿನಿಧಿಗಳಿಗೆ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ 2022-23ನೇ ಸಾಲಿನ 19ನೇ ವಾರ್ಷಿಕ ಮಹಾಸಭೆಗೆ ಆತ್ಮೀಯವಾದ ಸ್ವಾಗತವನ್ನು ಕೋರಿದರು. ವಾರ್ಷಿಕ ಮಹಾಸಭೆಯ ಆರಂಭದಲ್ಲಿ ಪತ್ತಿನ ಮಹಾಮಂಡಳದ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳುಗಳಿಂದ ದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರವರು ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೊರೋನಾ ಮಹಾಮಾರಿಯ ಪರಿಣಾಮದಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಸಂದರ್ಭದಲ್ಲಿ ಪತ್ತಿನ ಸಹಕಾರ ಸಂಘಗಳು ಸದಸ್ಯರ ಆರ್ಥಿಕ ಅಗತ್ಯತೆಗಳನ್ನು ಪೂರೈಸುವುದರ ಮೂಲಕ ಪರಿಣಾಮಕಾರಿ ಸೇವೆ ಸಲ್ಲಿಸಿವೆ ಎಂದು ಶ್ಲಾಘಿಸಿದರು. ರಾಜ್ಯದ ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ಮತ್ತಷ್ಟು ಪತ್ತಿನ ಸಹಕಾರ ಸಂಘಗಳ ಸ್ಥಾಪನೆ ಅವಶ್ಯಕತೆ ಇರುವುದನ್ನು ವ್ಯಕ್ತಪಡಿಸಿದ ಅವರು ಪತ್ತಿನ ಸಹಕಾರ ಚಳುವಳಿ ಪರಿಣಾಮಕಾರಿಗೊಳಿಸಲು ಸದಸ್ಯ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು ರಾಜ್ಯದಲ್ಲಿ ಅಂದಾಜು 5000ಕ್ಕೂ ಪತ್ತಿನ ಸಹಕಾರ ಸಂಘಗಳಿದ್ದು, ಪತ್ತಿನ ಸಹಕಾರ ಮಹಾಮಂಡಳದಲ್ಲಿ ಅಂದಾಜು 2,000ಕ್ಕೂ ಹೆಚ್ಚು ಸಂಘಗಳು ಸದಸ್ಯತ್ವ ಪಡೆದಿವೆ ಎಂದ ಅವರು ಮುಂಬರುವ ದಿನಗಳಲ್ಲಿ ಎಲ್ಲಾ ಪತ್ತಿನ ಸಂಘಗಳು ಮಹಾಮಂಡಳದಲ್ಲಿ ಸದಸ್ಯರಾಗುವಂತೆ ಮನವಿ ಮಾಡಿದರು. ರಾಜ್ಯದಲ್ಲಿ ಇ-ಸ್ಟ್ಯಾಂಪ್ ವ್ಯವಹಾರಗಳಿಗೆ ಪತ್ತಿನ ಮಹಾಮಂಡಳ ನೇತೃತ್ವ ವಹಿಸಿದ್ದು ವಾರ್ಷಿಕ 647 ಕೋಟಿ ರೂ. ಗಳಿಗೂ ಅಧಿಕ ವ್ಯವಹಾರವಾಗಿರುವುದನ್ನು ಅವರು ಸಭೆಗೆ ತಿಳಿಸಿದರು. ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿದ ಅವರು ಪತ್ತಿನ ಮಹಾಮಂಡಳವು ಶಿಕ್ಷಣ ತರಬೇತಿ ಮೂಲಕ ಮುಂಬರುವ ದಿನಗಳಲ್ಲಿ ಪರಿಣಾಮಕಾರಿ ಸೇವೆ ನೀಡಲು ಸಿದ್ಧವಿದೆ ಎಂದರು.

ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ.ಮಹೇಂದ್ರ ಪ್ರಸಾದ್‌ಗೌಡ, ನಿರ್ದೇಶಕರುಗಳಾದ ಸಿ.ಎಂ.ಮಾರೇಗೌಡ, ಬಿ.ಡಿ. ಭೂಕಾಂತ, ವಿ. ರಾಜು, ಡಾ. ಸಂಜಯ್ ಪಿ. ಹೊಸಮಠ, ಎಂ.ಜೆ. ನರೇಂದ್ರಕುಮಾರ, ಡಿ. ಚನ್ನಯ್ಯ, ಕೆ. ಕೃಷ್ಣಮೂರ್ತಿ, ಜಿ. ಮಲ್ಲಿಕಾರ್ಜುನಯ್ಯ, ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಧರೇಪ್ಪ ಮಹದೇವ ಅಲಗೂರ, ಗುರುಪಾದಪ್ಪ ಗೌಡ ಪಾಟೀಲ, ಹೊನ್ನಯ್ಯ ವಿ ಹಿರೇಮಠ, ಪಿ.ಕೆ. ಜಯಕೃಷ್ಣೇಗೌಡ, ಶೇಖರಗೌಡ ಮಾಲಿ ಪಾಟೀಲ, ಹೆಚ್.ಟಿ. ನಾಗೇಶ್, ಡಿ.ಆರ್. ನಾಗೇಶಪ್ಪ ಉಮೇಶ್ ಶಿ ಬಾಳಿ, ರವೀಂದ್ರ ಪ್ರಹ್ಲಾದ ಕಲಬುರ್ಗಿ, ಚಿತ್ತರಂಜನ್ ಬೋಳಾರ್ ಅವರುಗಳು ಸೇರಿದಂತೆ ನಿರ್ದೇಶಕರುಗಳು ವಾರ್ಷಿಕ ವರದಿಯ ಹಲವು ವಿವರಗಳನ್ನು ಸಭೆಗೆ ಮಂಡಿಸಿದರು ಹಾಗೂ ಸದಸ್ಯರೊಂದಿಗೆ ಮುಕ್ತವಾಗಿ ಚರ್ಚೆ ನಡೆಸಿದರು. ಇ-ಸ್ಟಾಂಪಿಂಗ್ ವ್ಯವಹಾರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಕೆಳಕಂಡ ಸಹಕಾರ ಸಂಘಗಳ ಪ್ರತಿನಿಧಿಗಳನ್ನು ಗೌರವಿಸಲಾಯಿತು.

**ಗ್ರೂಪ್-1** ವಿಭಾಗದಿಂದ ವಿಶ್ವ ಭಾರತಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್.,ಮಾರತ್ತಹಳ್ಳಿ, ಬೆಂಗಳೂರು, ಬಿ.ಎಸ್.ಆರ್ ಕ್ರೆಡಿಟ್




ಕೋ–ಆಪರೇಟಿವ್ ಸೊಸೈಟಿ ಲಿ., ಮಂಜುನಾಥನಗರ, ಬೆಂಗಳೂರು, ಪ್ರಗತಿ ಮಹಿಳಾ ಸಹಕಾರ ಸಂಘ ನಿ., ಕೋರಮಂಗಲ, ಬೆಂಗಳೂರು–560034. ಶ್ರೀ ಗೌರಿಗಣೇಶ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೋರಮಂಗಲ, ಬೆಂಗಳೂರು (ಕೋರಮಂಗಲ ಶಾಖೆ) ಶ್ರೀ ಅಣ್ಣಯ್ಯ ಶೆಟ್ಟಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೆ.ಆರ್.ಪುರಂ ಶಾಖೆ, ಬೆಂಗಳೂರು, ಇಂಡಿಯನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಾಗರಭಾವಿ 2ನೇ ಹಂತ, ಬೆಂಗಳೂರು.

**ಗ್ರೂಪ್–2** ವಿಭಾಗದಿಂದ ಶ್ರೀ ವಾಸವಿ ಅಭಿವೃದ್ಧಿ ಸಹಕಾರ ಸಂಘ ನಿ., ಪಿ.ಜೆ.ಬಡಾವಣೆ, ದಾವಣಗೆರೆ, ಶ್ರೀ ರೇಣುಕಾಂಬ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ವಿನೋಬನಗರ, ದಾವಣಗೆರೆ, ಸರ್ಕಾರಿ ನೌಕರರ ವಿವಿಧೋದ್ದೇಶ ಸಹಕಾರ ಸಂಘ ನಿ., ತುಮಕೂರು, ಶ್ರೀ ಶಂಕರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಕೋಲಾರ, ಬನಶಂಕರಿ ಮಹಿಳಾ ವಿವಿಧೋದೇಶ ಗೃಹ ಕೈಗಾರಿಕಾ ಮಾರಾಟ ಸಹಕಾರ ಸಂಘ ನಿ.,ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಪತ್ತಿನ ಸಹಕಾರ ಸಂಘ ನಿ., ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ.

**ಗ್ರೂಪ್–3** ವಿಭಾಗದಿಂದ ಹುಬ್ಬಳ್ಳಿ ವಕೀಲರ ಪತ್ತಿನ ಸಹಕಾರಿ ಸಂಘ ನಿ., ಹುಬ್ಬಳ್ಳಿ ಧಾರವಾಡ ಜಿಲ್ಲೆ. ಅವಾಮಿ ಅರ್ಬನ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಬೆಳಗಾಂ, ಶ್ರೀ ಭಾಗ್ಯಲಕ್ಷ್ಮಿ ಪತ್ತಿನ ಸಹಕಾರ ಸಂಘ ನಿಯಮಿತ ತಿಲಕವಾಡಿ, ಬೆಳಗಾವಿ ಜಿಲ್ಲೆ (ತಿಲಕವಾಡಿ ಶಾಖೆ) ಯಮಕನಮರಡಿ ಅರ್ಬನ್ ಕೋ–ಆಪ್ ಕ್ರಡಿಟ್ ಸೊಸಾಯಿಟಿ ಲಿ., ಯಮಕನಮರಡಿ, ಬೆಳಗಾವಿ ಜಿಲ್ಲೆ. ಧಾರವಾಡ ಜಿಲ್ಲಾ ಕಂದಾಯ ನೌಕರರ ಪತ್ತಿನ ಸಹಕಾರ ಸಂಘ ನಿ., ಧಾರವಾಡ, ಮಾರ್ಕಂಡೆಯ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕಂಗ್ರಾಳಿ, ಬೆಳಗಾಂ ಜಿಲ್ಲೆ.

**ಗ್ರೂಪ್–4** ವರದ ವಿನಾಯಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬಳ್ಳಾರಿ ಜಿಲ್ಲೆ. ಸಮನ್ವಯ ವಿವಿಧೋದ್ದೇಶ ಸಹಕಾರ ಸಂಘ ನಿ., ಕಲಬುರಗಿ, ಬಜಾರ ವ್ಯಾಪಾರಸ್ಥರ ಪತ್ತಿನ ಸಹಕಾರ ಸಂಘ ನಿ.,ಹುನಗುಂದ, ಬಾಗಲಕೋಟೆ ಜಿಲ್ಲೆ. ಈಶಾನ್ಯ ಕರ್ನಾಟಕ ವಾಲ್ಮೀಕಿ



















ನಾಯಕರ ಪತ್ತಿನ ಸಹಕಾರ ಸಂಘ ನಿ., ಶೋರಾಪುರ ಯಾದಗಿರಿ ಜಿಲ್ಲೆ ಶೇಖ್ ಪತ್ತಿನ ಸಹಕಾರ ಸಂಘ ನಿ., ರಾಯಚೂರು, ಖ್ವಾಜಾ ಗರೀಬನವಾಜ ಮೈನಾರಿಟಿ ಮಲ್ಟಿಪರಪಸ್ ಸೋಸಾಯಿಟಿ ಲಿ., ವಿಜಯಪುರ.

ಗ್ರೂಪ್–5 ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ ನಿ., ಸರಸ್ವತಿಪುರಂ, ಮೈಸೂರು, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ನಿ., ಮಂಗಳೂರು, ದಕ್ಷಿಣಕನ್ನಡ ಜಿಲ್ಲೆ ಶ್ರೀ ಶ್ರೀಕಂಠೇಶ್ವರ ವಿವಿಧೋದ್ದೇಶ ಸಹಕಾರ ಸಂಘ ನಿ., ಮೈಸೂರು, ಅರಸು ಮಂಡಳಿ ಪತ್ತಿನ ಸಹಕಾರ ಸಂಘ ನಿ., ಮೈಸೂರು, ಬ್ರಹ್ಮರ್ಷಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಂಜನಗೂಡು, ಮೈಸೂರು ಜಿಲ್ಲೆ ನಾಗಮಂಗಲ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿ., ನಾಗಮಂಗಲ, ಮಂಡ್ಯ ಜಿಲ್ಲೆ.

ಹಾಜರಿದ್ದ ಇ–ಸ್ಟಾ ಂಪಿಂಗ್ ಕೇಂದ್ರಗಳ ಪ್ರತಿನಿಧಿಗಳಿಗೆ ಆಯಾ ವಿಭಾಗದ ಆಡಳಿತಮಂಡಳಿ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು.

ಸದಸ್ಯ ಸಹಕಾರ ಸಂಘವಾದ ಶ್ರೀದುರ್ಗಾಮಾತಾ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಲಿ., ನಂದಗಡ, ಬೆಳಗಾಂ ಜಿಲ್ಲೆಯ ಆಡಳಿತಮಂಡಳಿಸದಸ್ಯರುಗಳು ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಪತ್ತಿನ ಮಹಾಮಂಡಳದ ಆಡಳಿತಮಂಡಲಿ ಸದಸ್ಯರುಗಳಿಗೆ ಅಭಿನಂದಿಸಿ ಸನ್ಮಾನಿಸಿದರು. ಹಾಜರಿದ್ದ ಸದಸ್ಯರುಗಳು ಪತ್ತಿನ ಮಹಾಮಂಡಳ ತನ್ನ ಸ್ವಂತ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

## ಕರ್ನಾಟಕ ಸರ್ಕಾರ
## ಸಹಕಾರ ಚುನಾವಣಾ ಪ್ರಾಧಿಕಾರ

**ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, "ಎ" ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027.**

**ಸಂಖ್ಯೆ: ಸಚುಪ್ರಾ/ಆಡಳಿತ/39/ಸ.ಸ.&ಸೌ.ಸ.ಕಾ/ತಿದ್ದುಪಡಿ/ಸುತ್ತೋಲೆ/2021–22** **ದಿನಾಂಕ : 17.07.2023**

## ಸುತ್ತೋಲೆ

ವಿಷಯ : ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ರನ್ವಯ ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ತಿದ್ದುಪಡಿಯಾಗಿರುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಅಧಿಸೂಚನೆ ಸಂ.ಸಿ.ಒ/71/ಸಿಎಲ್ಎಂ/2020(ಇ) ದಿನಾಂಕ: 8.12.2020.
2) ಈ ಕಛೇರಿಯ ಪತ್ರ ಸಂಖ್ಯೆ: ಸಚುಪ್ರಾ/ಆಡಳಿತ/39/ತಿದ್ದುಪಡಿ/2020–21 ದಿನಾಂಕ: 29.12.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ರನ್ವಯ ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ, ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ/ಚುನಾವಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು, ಉಪನಿಯಮ (2) ರಲ್ಲಿ ``A(i), (ii), (iii), (iv), (v) ಮತ್ತು (vi)'' ನ್ನು ಹೊಸದಾಗಿ ಸೇರ್ಪಡೆ ಮಾಡಿ ತಿದ್ದುಪಡಿ ಮಾಡಲಾಗಿರುತ್ತದೆ.

ಅದರಂತೆ ಉಲ್ಲೇಖ(2)ರ ಪತ್ರದಲ್ಲಿ, ಸದರಿ ಅಧಿಸೂಚನೆಯನ್ನು ಎಲ್ಲಾ ಚುನಾವಣಾಧಿಕಾರಿಗಳಿಗೆ ಕಳುಹಿಸಿ, ತಿದ್ದುಪಡಿಯನ್ವಯ ಅಗತ್ಯ ಕ್ರಮವಿಡಲು ಸೂಚಿಸಲಾಗಿರುತ್ತದೆ.

ಪ್ರಸ್ತುತ ಚುನಾವಣೆ ನಿಗಧಿಯಾಗಿರುವ ಕೆಲವು ಸಹಕಾರ ಸಂಘಗಳ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ, ಸಹಕಾರ ಸಂಘವು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ (2-A) ರನ್ವಯ ಸಂಘದ ಚುನಾವಣೆಗೆ 195 ದಿನಗಳು ಬಾಕಿ ಇರುವಾಗ ಅನರ್ಹ ಸದಸ್ಯರಿಗೆ ನೋಟೀಸು ನೀಡಿ, ಸ್ವೀಕೃತವಾದ ಅಹವಾಲುಗಳನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಿ, ನಿಯಮಾನುಸಾರ ವಿಚಾರಣೆ ನಡೆಸಿ ವಿಲೇಗೊಳಿಸಲು ಕ್ರಮವಿಡದೇ ಕರಡು/ಅಂತಿಮ ಮತದಾರರ ಪಟ್ಟಿಯನ್ನು ಸಿದ್ದಪಡಿಸಿರುವುದರಿಂದ ಸಹಕಾರ ಸಂಘದ ಚುನಾವಣೆಯಲ್ಲಿ ಮತ ಹಾಕಲು ಅವಕಾಶ ವಂಚಿತರಾಗಿರುವುದರಿಂದ ಅರ್ಜಿದಾರರೆಲ್ಲರಿಗೂ ಸಹಕಾರ ಸಂಘದ ಚುನಾವಣೆಯಲ್ಲಿ ಮತ ಹಾಕಲು ಅವಕಾಶ ನೀಡುವಂತೆ ಮಾನ್ಯ ಉಚ್ಚ ನ್ಯಾಯಾಲಯವನ್ನು ಕೋರಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಇಂತಹ ಪ್ರಕರಣಗಳಲ್ಲಿ ನೀಡುತ್ತಿರುವ ಮಧ್ಯಂತರ ಆದೇಶದಲ್ಲಿ ಅರ್ಜಿದಾರರೆಲ್ಲರಿಗೂ ಸಹಕಾರ ಸಂಘದ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ನೀಡಿ, ಅವರು ಚಲಾಯಿಸಿರುವ ಮತದಾನದ ಪತ್ರವನ್ನು ಪ್ರತ್ಯೇಕ ಪೆಟ್ಟಿಗೆಯಲ್ಲಿರಿಸಿ, ನ್ಯಾಯಾಲಯದ ಮುಂದಿನ ಆದೇಶದವರೆಗೆ ಚುನಾವಣಾ ಫಲಿತಾಂಶ ಘೋಷಿಸದಿರಲು ನಿರ್ದೇಶನ ನೀಡುತ್ತಿದೆ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು ಕೆಲವು ರಿಟ್ ಅರ್ಜಿಗಳಲ್ಲಿ (ಪ್ರಕರಣಗಳಲ್ಲಿ) ಅಂತಿಮ ಆದೇಶದಲ್ಲಿ ಅರ್ಜಿದಾರರೆಲ್ಲರು ಚಲಾಯಿಸಿರುವ ಮತಗಳನ್ನು ಸೇರಿಸಿ ಎಣಿಕೆ ಮಾಡಿ ಚುನಾವಣಾ ಫಲಿತಾಂಶವನ್ನು ಘೋಷಿಸಲು ರಿಟರ್ನಿಂಗ್ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತದೆ ಹಾಗೂ ಚುನಾವಣಾ ಫಲಿತಾಂಶದಿಂದ ಬಾಧಿತರಾದವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿ ದಾವೆ ದಾಖಲಿಸಲು ಅವಕಾಶವನ್ನು ನೀಡಿರುತ್ತದೆ.

ನಿಯಮ 13ಡಿ(2-A) ಯನ್ನು ನಿಯಮಾನುಸಾರ ಪಾಲಿಸದೇ ಚುನಾವಣೆ ನಡೆಯುತ್ತಿರುವುದರಿಂದ ಚುನಾವಣಾ ಸಂಬಂಧಿತ ರಿಟ್ ಅರ್ಜಿಗಳು/ದಾವೆಗಳು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ದಾಖಲಾಗಲು ಅವಕಾಶ ಕಲ್ಪಿಸಿದಂತಾಗಿದೆ ಹಾಗೂ ಸಂಘಗಳ ಚುನಾವಣೆಗಳು ಸರಾಗವಾಗಿ ನಡೆಯಲು ಅಡಚಣೆಯುಂಟಾಗಿರುತ್ತದೆ.

ಈ ಅಂಕಗಳ ಹಿನ್ನೆಲೆಯಲ್ಲಿ, ಉಲ್ಲೇಖ(1)ರ ಅಧಿಸೂಚನೆಯನ್ವಯ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(2–ಂ)ನ್ನು ಕಡ್ಡಾಯವಾಗಿ ಪಾಲಿಸಿ ಕರಡು/ಅಂತಿಮ ಮತದಾರರ ಪಟ್ಟಿ ಸಿದ್ದಪಡಿಸಿ ಚುನಾವಣೆ ನಡೆಸಲು ಎಲ್ಲಾ ಚುನಾವಣಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಿಡುವುದು ಹಾಗೂ ತಮ್ಮ ವ್ಯಾಪ್ತಿಯಲ್ಲಿ ಚುನಾವಣೆಗೆ ಬಾಕಿ ಇರುವ ಎಲ್ಲಾ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಲು ನಿರ್ದೇಶನ ನೀಡಿದೆ. ಎಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳಿಗೆ ಈ ಬಗ್ಗೆ ಮಾಹಿತಿ ನೀಡತಕ್ಕದ್ದು.

ಸಹಿ/–
**ಆಯುಕ್ತರು**
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು

# ಗಣೇಶೋತ್ಸವ ಮತ್ತು ಚಂದ್ರಯಾನದ ಸಂಭ್ರಮ





ವಿಘ್ನ ವಿನಾಶಕಾರಿ, ಸಂಕಷ್ಟ ನಿವಾರಕ ಗಣೇಶನಿಗ ಮೊದಲ ಪೂಜೆ ಸಲ್ಲುತ್ತದೆ. ಭಾರತದಲ್ಲಿ ಜಾತಿ ಮತ, ಪಂಥ, ಭಾಷೆ, ಬಣ್ಣ ಪ್ರದೇಶಗಳ ಭೇದವಿಲ್ಲದೆ ಸರ್ವವ್ಯಾಪಿಯಾಗಿ ಗಣೇಶ ಚತುರ್ಥಿ ಆಚರಿಸಲಾಗುತ್ತದೆ. ಮನೆ ಮನೆಗಳಲ್ಲೂ ಗಣೇಶನ ಪೂಜೆ ಮಾಡುವ ಜೊತೆಗೆ ಸಾರ್ವಜನಿಕ ಗಣೇಶೋತ್ಸವಗಳನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ದೇಶಾದ್ಯಂತ ವೈವಿಧ್ಯ ಸ್ವರೂಪದ ಅತ್ಯಾಕರ್ಷಕ, ಕಣ್ಮನ ಸೆಳೆಯುವ ಕೋಟ್ಯಾಂತರ ಗಣೇಶ ಮೂರ್ತಿಗಳನ್ನು ಪೂಜಿಸಲಾಗುತ್ತದೆ. ಜೊತಗೆ ಸಂಗೀತ, ನೃತ್ಯ, ಗಾಯನ, ಜಾನಪದ ಕುಣಿತ ಸಹಿತ ವೈವಿಧ್ಯಮಯ ಮನೋರಂಜನೆ ಕಾರ್ಯಕ್ರಮಗಳನ್ನು ಹಬ್ಬ ಆಚರಣೆಯ ಅಂಗವಾಗಿ ನಡೆಸಲಾಗುತ್ತದೆ, ಅನ್ನದಾನ ಪ್ರಸಾದ ವಿತರಣೆ ನಡೆಯತ್ತದೆ.

ಗಣೇಶ ಆಹಾರ ಪ್ರಿಯ ಆದರಿಂದ ಗಣೇಶ ಹಬ್ಬ ಅಂಗವಾಗಿ ಮೋದಕ ಬಗೆಬಗೆಯ ಕಜ್ಜಾಯಗಳನ್ನು ಮಾಡಿ ಬಡಿಸುವುದು ವಾಡಿಕೆ ಹಾಗೂ ಕಜ್ಜಾಯಗಳನ್ನು ನೆರೆ ಹೊರೆಯವರಿಗೂ ಸ್ನೇಹಿತರಿಗೂ ಸಂಬಂಧಿಕರಿಗೂ ಹಂಚವುದು ಸರ್ವೆ ಸಾಮಾನ್ಯ. ಗಣೇಶ ಚತುರ್ಥಿ ಆಚರಣೆಯ ಸಮಯದಲ್ಲಿ ಕಡಿಮೆಯಂದರೂ 21 ಬಗೆಯ ತಿಂಡಿಗಳನ್ನು ತಯಾರಿಸುತ್ತಾರೆ.

ಅನೇಕ ಬಗೆಯ ಲಡ್ಡುಗಳು, ಕಡುಬು, ರವೆ ಉಂಡೆ, ಮೋದಕ, ಕರ್ಜಿಕಾಯಿ, ಪಾಯಸ, ವಡೆ ಹೀಗೆ ಅನೇಕ ಬಗೆಯ ರುಚಿ ರುಚಿ ತಿಂಡಿ–ತಿನಿಸುಗಳನ್ನು ತಯಾರಿಸಲಾಗುತ್ತದೆ.

### ಚಂದ್ರನಿಗೂ ಗಣೇಶನಿಗೂ ನೇರ ಸಂಬಂಧ

ಗಣೇಶನ ಪೌರಾಣಿಕ ಕಥೆಯಲ್ಲಿ ಚಂದ್ರನಿಗೆ ನೇರ ಸಂಬಂಧವಿದೆ. ಒಮ್ಮೆ ಬಾಲ ಗಣೇಶ ಹೊಟ್ಟೆ ತುಂಬಾ ಊಟ ಮಾಡಿಕೊಂಡ ಬರುವಾಗ ಕೆಳಗೆ ಬಿದ್ದು ಹೊಟ್ಟೆ ಒಡೆದು ಹೋಗುತ್ತದೆ. ಆಗ ಗಣೇಶ ಹೊಟ್ಟೆಗೆ ನಾಗರಹಾವು ಸುತ್ತಿಕೊಳ್ಳುತ್ತಿರುತ್ತಾನೆ ಇದನ್ನು ನೋಡಿ ಚಂದ್ರ ನಗುತ್ತಾನೆ ಆಗ ಕೋಪಗೊಂಡ ಗಣೇಶ ತನ್ನ ಒಂದು ದಂತ ಮುರಿದು ಚಂದ್ರನಿಗೆ ಹೊಡೆಯುತ್ತಾನೆ ಜೊತೆಗೆ ಶಾಪ ಹಾಕುತ್ತಾನೆ ಆದ್ದರಿಂದ ಗಣೇಶೋತ್ಸವದ ದಿನ ಚಂದ್ರನ ದರ್ಶನ ಮಾಡಿದರೆ ದೋಷ ತಗಲುತ್ತದೆ ಎಂಬ ಪ್ರತೀತಿ ಇದೆ. ಆ ಹಿನ್ನಲೆಯಲ್ಲಿ ಗಣೇಶ ಚತುರ್ಥಿ ದಿನ ಚಂದ್ರನ ದರ್ಶನ ಮಾಡಲು ಭಕ್ತರು ಹಿಂಜರಿಯುತ್ತಾರೆ.

ಗಣೇಶ ಮತ್ತು ಚಂದ್ರ ನಡುವಿನ ಭಿನ್ನಾಭಿಪ್ರಾಯ ನಡುವೆಯೆ ಭೂಮಿಯಿಂದ 3 ಲಕ್ಷ 84 ಸಾವಿರ ಕಿಮೀ ದೂರವಿರುವ ಚಂದ್ರನ ದಕ್ಷಿಣ ಧ್ರುವದ ಅಂಗಳದ ಮೇಲೆ ಭಾರತದ ಬಾಹ್ಯಾಕಾಶ ವಿಜ್ಞಾನಿಗಳು ದಿಗ್ವಿಜಯ ಸಾಧಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಚಂದ್ರನ ದಕ್ಷಿಣ ದ್ರುವದ ಮೇಲೆ ವಿಕ್ರಮ್ ಲ್ಯಾಂಡರ್ ಅನ್ನು ನೆಲೆಯೂರಿಸುವ ಮೂಲಕ ಚಂದ್ರನ ಇಂಚಿಂಚು ಮಾಹಿತಿಗಳನ್ನು ಕಲೆಹಾಕುವ ಕಾರ್ಯದಿಂದ ಚಂದ್ರನ ಕುರಿತು ಇರುವ ಸಂಪೂರ್ಣ ಅಭಿಪ್ರಾಯ ಬದಲಾಗಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಿಕ್ರಮ್ ಲ್ಯಾಂಡರ್ ಇಳಿದ ಪ್ರದೇಶಕ್ಕೆ "ಶಿವಶಕ್ತಿ" ಎಂದು ನಾಮಕರಣ ಮಾಡುವ ಮೂಲಕ ಚಂದ್ರಯಾನಕ್ಕೆ ವಿಶೇಷ ಅರ್ಥ ಕಲ್ಪಿಸಿದ್ದಾರೆ.

ಗಣೇಶನನ್ನು ಪೂಜಿಸುವ ನಾಡಿನಿಂದ ಚಂದ್ರನಿಗೆ ನೇರ ಸಂಪರ್ಕ ಕಲ್ಪಿಸಿದ ಇಸ್ರೋ ವಿಜ್ಞಾನಿಗಳು ಅಲ್ಲಿ ಗಣೇಶನ ಅಪ್ಪ "ಶಿವಶಕ್ತಿ" ಹೆಸರು ಅಜರಾಮರ ಆಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಚಂದ್ರ ಉಪಗ್ರಹ ಮೇಲೆ ವಿವಿಧ ಶೋಧ ಕಾರ್ಯ ನಡೆಸುತ್ತಿರುವ ವಿಜ್ಞಾನಿಗಳು, ಭವಿಷ್ಯದಲ್ಲಿ ಶಿವಶಕ್ತಿಯ ಸಮೀಪವೆ ವಿಘ್ನವಿನಾಶಕ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜೆ ಮಾಡುವ ಮೂಲಕ ಶಿವಶಕ್ತಿಯ ಜೊತೆಗೆ ಗಣೇಶನ ಶಕ್ತಿ ಮಿಲನವಾಗುವಂತೆ ಮಾಡಿ. ಆ ಮೂಲಕ ಚಂದ್ರನಿಗೆ ಶಾಶ್ವತವಾಗಿ ಗಣೇಶನ ಶಾಪದಿಂದ ಮುಕ್ತಿ ದೊರಕುವಂತೆ ಮಾಡುವ ಕಾಯಕದಲ್ಲಿ ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳು ಯಶಸ್ವಿಯಾದರೂ ಆಶ್ಚರ್ಯ ಪಡಬೇಕಾಗಿಲ್ಲ. ಚಂದ್ರಯಾನ 3 ಯಶಸ್ವಿಯಾದ ಪ್ರಯುಕ್ತ ಹಲವಾರು





ಭಕ್ತರು ಗಣೇಶ ಚಂದ್ರಯಾನ ಮಾಡುವ ಸಂದೇಶ ಸಾರುವ ರೀತಿಯಲ್ಲಿ ಗಣೇಶಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವುದನ್ನು ಕಾಣಬಹುದು. ಆ ಮೂಲಕ ಚಂದ್ರಯಾನದ ರೂವಾರಿಗಳಾದ ವಿಜ್ಞಾನಿಗಳಿಗೆ ಗೌರವ ಸಲ್ಲಿಸುತ್ತಿದ್ದಾರೆ.

**ಪರಿಸರ ಸ್ನೇಹಿ ಗಣೇಶ**

ಇಂದು ವೈವಿಧ್ಯಮಯ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸುವು ವಾಡಿಕೆಯಾಗಿದೆ. ಅದರಲ್ಲಿ ಪರಿಸರಕ್ಕೆ ಮಾರಕವಾದ ಪ್ಲಾಸ್ಟರ್ ಆಫ್ ಪ್ಯಾರೀಸ್ ಗಣಪತಿಮೂರ್ತಿ ಹಾವಳಿ ವರ್ಷ ವರ್ಷ ಹೆಚ್ಚಾಗುತ್ತಿದೆ. ಅಲ್ಲದೆ ರಾಸಾಯನಿಕ ಬಣ್ಣ ಬಳಸಿದ ಗಣಪತಿ ಮೂರ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತದೆ ಇದರಿಂದ ಪರಿಸರದ ಮೇಲೆಪ ದುಷ್ಪರಿಣಾಮ ಬೀರುವ ಜೊತೆಗೆ ಜಲಚರಗಳ ಜೀವಕ್ಕೂ ಮಾರಕವಾಗುತ್ತದೆ ಆ ಕಾರಣದಿಂದ ಮಣ್ಣಿನಿಂದ ನಿರ್ಮಿಸಿದ ಬಣ್ಣಹಚ್ಚದ ಗಣೇಶ ಮೂರ್ತಿಗಳನ್ನೆ ಪೂಜೆಗೆ ಬಳಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಪರಿಸರ ವಾದಿಗಳು ದೊಡ್ಡ ಪ್ರಮಾಣದ ಪ್ರಚಾರ ನೀಡಿದ ಫಲವಾಗಿ ವರ್ಷ ವರ್ಷ ಮಣ್ಣಿನ ಗಣಪತಿ ಮೂರ್ತಿ ಬಳಕೆಯ ಪ್ರಮಾಣ ಹೆಚ್ಚಾಗುತ್ತಿದೆ.

ವಿದ್ಯೆ ಬುದ್ಧಿಗೆ ಅಧಿನಾಯಕನಾದ ಗಣೇಶ ನಾಡಿನ ಜನತೆಯಲ್ಲಿ ಕರುಣೆ,ಧಯೆ, ತ್ಯಾಗ, ಶಾಂತಿ, ಸೌಹಾರ್ದತೆ, ಪ್ರೀತಿ, ಪೇಮ ಮೂಡಿಸಿ ಸಮೃದ್ಧಿಯನ್ನು ತರಳಿ ಎಂಬುದು ಪ್ರತಿಯೊಬ್ಬ ಹಾರೈಕೆಯಾಗಿದೆ.

**– ಸವಿತಾ ನಾಯ್ಕ್, ಬೆಂಗಳೂರು**



# ಉತ್ತಮ ಗ್ರಾಹಕ ಸೇವೆ, ಆರ್ಥಿಕವಾಗಿ ಸದೃಢ
# ರೂ. 2.42 ಕೋಟಿ ನಿವ್ವಳ ಲಾಭ : ಪ್ರಗತಿಯ ಪಥದಲ್ಲಿ ತುಮಕೂರಿನ ಸ್ವಾಮಿ ವಿವೇಕಾನಂದ ಪತ್ತಿನ ಸಹಕಾರ ಸಂಘ

ಪಟ್ಟಣ ಪ್ರದೇಶದ ಜನರಿಗೆ ಆರ್ಥಿಕವಾಗಿ ನೆರವಾಗುವುದರಲ್ಲಿ ಪತ್ತಿನ ಸಹಕಾರ ಸಂಘಗಳ ಪಾತ್ರ ಅತ್ಯಂತ ಪ್ರಮುಖವಾದುದಾಗಿದೆ. ರಾಜ್ಯದಲ್ಲಿ ಸುಮಾರು 5 ಸಾವಿರ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಸಹಕಾರ ಚಳವಳಿಯ ಬೆಳವಣಿಗೆಗೆ ಈ ವಲಯ ಮಹತ್ತರವಾದ ಕೊಡುಗೆಯನ್ನು ನೀಡುತ್ತಿದೆ. ತುಮಕೂರು ಜಿಲ್ಲೆ ಸಹಕಾರ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದೆ. ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಜನರ ಆರ್ಥಿಕ ಸ್ವಾವಲಂಬಿ ಜೀವನಕ್ಕೆ ನೆರವಾಗಿದ್ದು, ಇಂತಹ ಸಂಘಗಳಲ್ಲಿ ಸ್ವಾಮಿ ವಿವೇಕಾನಂದ ಪತ್ತಿನ ಸಹಕಾರ ಸಂಘವು ಕಳೆದ 25 ವರ್ಷಗಳಿಂದ ತನ್ನ ಸದಸ್ಯರುಗಳಿಗೆ ಮತ್ತು ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಯಶಸ್ವಿಯಾಗಿದೆ.

**ಸಂಘದ ಪ್ರಾರಂಭ :** "ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು" ಎಂಬ ನಾಣ್ನುಡಿಯಂತೆ ಹಿರಿಯರು ಹಾಗೂ ಯುವಜನರು ಸೇರಿಕೊಂಡು ಹಿಂದು ಸಾದರ ಸಮಾಜದ ಆರ್ಥಿಕ ಸ್ವಾವಲಂಬನ ಜೀವನಕ್ಕಾಗಿ ಪರಸ್ಪರ ಚಿಂತನ ಮಂಥನ ಮಾಡಿ ಹಲವಾರು ಹಿರಿಯ ಸಹಕಾರಿಗಳ ಮಾರ್ಗದರ್ಶನದೊಂದಿಗೆ 1996ರಲ್ಲಿ ಸಂಘವನ್ನು ಸ್ಥಾಪನೆ ಮಾಡಿದರು. ಸಂಘವು ಈಗಾಗಲೇ ರಜತ ಮಹೋತ್ಸವವನ್ನು ಆಚರಿಸಿಕೊಂಡಿದ್ದು, ತನ್ನ ಸಂಸ್ಥೆಯ ಸಾಧನೆಗೆ 63ನೇ ಹಾಗೂ 69ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ಉತ್ತಮ ಸಹಕಾರ ಸಂಘ" ಎಂದು ಪ್ರಶಸ್ತಿಗೆ ಬಾಜನವಾಗಿದೆ. ಸಂಸ್ಥೆಯ ಸಾಧನೆಗೆ ಸಂಘದ ಅಧ್ಯಕ್ಷರಾದ ಪಿ. ಮೂರ್ತಿ ಅವರ ಸಾರಥ್ಯದಲ್ಲಿ ಆಡಳಿತ ಮಂಡಳಿಯ ಸಹಕಾರ ಹಾಗೂ ಅಧಿಕಾರಿ ಸಿಬ್ಬಂದಿ ವರ್ಗದವರ ಸೇವಾಬದ್ಧತೆ ಕಾರಣವೆನ್ನಬಹುದು.

### ಸಂಘದಿಂದ ಸದಸ್ಯರುಗಳಿಗೆ ನೀಡುವ ಸೌಲಭ್ಯಗಳು


ಈಗಾಗಲೇ ಸದಸ್ಯರುಗಳ ಅನುಕೂಲಕ್ಕಾಗಿ ಸಂಘದಿಂದ ಆಭರಣ ಸಾಲ, ವಾಹನ ಸಾಲ, ವಿದ್ಯಾಭ್ಯಾಸ ಸಾಲ, ಗೃಹ ನಿರ್ಮಾಣ ಸಾಲ, ಮಾರ್ಟ್‌ಗೇಜ್ ಸಾಲ, ವ್ಯಾಪಾರ ಸಾಲ, ಸಂಬಳ ಆಧಾರಿತ ಸಾಲವನ್ನು




ನೀಡಲಾಗುತ್ತಿದೆ.

### ಸಂಘದಿಂದ ನಿರ್ವಹಿಸುತ್ತಿರುವ ಸಾಮಾಜಿಕ ಚಟುವಟಿಕೆಗಳು

ಸಂಘದಿಂದ ಪ್ರತಿವರ್ಷ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಸಂಘದ ಸದಸ್ಯರುಗಳು ಜನಪ್ರತಿನಿಧಿಗಳಾಗಿ ಆಯ್ಕೆಯಾದರೆ ಅವರುಗಳಿಗೂ ಸನ್ಮಾನಿಸಿ, ಗೌರವಿಸಲಾಗುತ್ತಿದೆ. ಪ್ರತಿವರ್ಷ ತನ್ನ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರುಗಳಿಗೆ ಪ್ರೋತ್ಸಾಹಿಸಲು 'ಉತ್ತಮ ಗ್ರಾಹಕರು ಹಾಗೂ ಉತ್ತಮ ಠೇವಣಿದಾರ' ಎಂಬ ಪುರಸ್ಕಾರವನ್ನು ನೀಡಿ ಗೌರವಿಸಲಾಗುತ್ತಿದೆ. ಇದರ ಜೊತೆಗೆ ಪ್ರತಿ ತಿಂಗಳು ಯಾವುದೇ ಡಿಫಾಲ್ಟ್ ಇಲ್ಲದೆ ಸಾಲವನ್ನು ಹಿಂತಿರುಗಿಸುವ ಸದಸ್ಯರುಗಳಿಗೆ ಬಡ್ಡಿಯಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ, ವಿಧವೆಯರಿಗೆ ಹಾಗೂ ವಿಶೇಷಚೇತನರು ಸಂಘದಲ್ಲಿ ಠೇವಣಿ ಇಟ್ಟರೆ ಅವರಿಗೆ 0.5% ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ.




ರಜತ ಮಹೋತ್ಸವದ ಉದ್ಘಾಟನಾ ಸಮಾರಂಭದ ಸಂದರ್ಭ

| ಸಂಘದ ಪ್ರಗತಿಯ ಅಂಕಿ ಅಂಶಗಳು (ರೂ. ಲಕ್ಷಗಳಲ್ಲಿ) | | | |
|---|---|---|---|
| | 2020–21 | 2021–22 | 2022–23 |
| ಸದಸ್ಯರು | 6315 | 6659 | 7006 |
| ಷೇರು ಬಂಡವಾಳ | 249.86 | 266.68 | 295.59 |
| ನಿಧಿಗಳು | 1044.22 | 1314.46 | 1741.57 |
| ಠೇವಣಿಗಳು | 9444.63 | 9829.08 | 9888.92 |
| ಹೂಡಿಕೆಗಳು | 3755.85 | 3945.00 | 3763.85 |
| ಸಾಲಗಳು | 6064.99 | 6636.07 | 7567.71 |
| ನಿವ್ವಳ ಲಾಭ | 223.21 | 230.08 | 242.19 |
| ಆಡಿಟ್ ವರ್ಗೀಕರಣ | ಎ | ಎ | ಎ |

**ಸಂಘದ ಮುಂದಿನ ಯೋಜನೆಗಳು :**

ಸಂಘದ ವತಿಯಿಂದ ಸದಸ್ಯರುಗಳಿಗೆ ಆರೋಗ್ಯ ವಿಮೆ ಮಾಡಿಸುವ ಯೋಜನೆಯನ್ನು ಸಂಘವು ಈಗಾಗಲೇ ಹೊಂದಿದೆ. ಇದರ ಜೊತೆಗೆ ಶಾಖೆಗಳ ವಿಸ್ತರಣೆ ಸೇರಿದಂತೆ ಸರ್ಕಾರ ಮಂಜೂರು ಮಾಡಿರುವ ಜಾಗದಲ್ಲಿ ಸದಸ್ಯರುಗಳ ಅನುಕೂಲಕ್ಕಾಗಿ ಸಮುದಾಯ ಭವನವನ್ನು ನಿರ್ಮಾಣ ಮಾಡುವ ಗುರಿಯನ್ನು ಸಂಘವು ಹಾಕಿಕೊಂಡಿದೆ.

## ಆಡಳಿತ ಮಂಡಳಿ ಸದಸ್ಯರುಗಳು




# ಡಾ. ಬಿ.ಡಿ. ಭೂಕಾಂತರವರಿಗೆ ಪ್ರಶಸ್ತಿ : ಅಭಿನಂದನೆ



ಹಿರಿಯ ಸಹಕಾರಿ ಧುರೀಣ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ನಿರ್ದೇಶಕರಾದ ಡಾ.ಬಿ.ಡಿ.ಭೂಕಾಂತ ಅವರಿಗೆ ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಪ್ರತಿಷ್ಠಿತ ಸಹಕಾರಿ ಪಿತಾಮಹ, "ಶಿದ್ದನಗೌಡ ಪಾಟೀಲ ಸಹಕಾರಿ ಭೂಷಣ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಶ್ರೀಯುತರಿಗೆ ಸಹಕಾರಿ ಗಣ್ಯರು ಶುಭಾಶಯಗಳನ್ನು ಸಲ್ಲಿಸಿದ್ದಾರೆ.

## ಶೃಂಗ ಸಹಕಾರ ಸಂಸ್ಥೆಗಳ ಸಮಾಲೋಚನಾ ಸಭೆ

### ಯುವಜನರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯರಾಗಲಿ, ಸಹಕಾರಿಗಳು ಸಹಕಾರಾಭಿವೃದ್ಧಿ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ಸಕಾಲ,

# ಜನರ ನಿರೀಕ್ಷೆಗನುಗುಣವಾಗಿ ಕೆಲಸ ಮಾಡಲು ಸಹಕಾರ ಸಚಿವ ಕೆ.ಎನ್. ರಾಜಣ್ಣ ಕರೆ




**ಬೆಂಗಳೂರು** : ಸಹಕಾರ ಆಂದೋಲನದ ಮೂಲಕ ಪ್ರತಿಯೊಬ್ಬರಿಗೂ ಸೇವೆ ನೀಡಲು ಸಾಧ್ಯವಿದೆ. 1904ರಲ್ಲಿ ಪ್ರಾರಂಭವಾದ ಕರ್ನಾಟಕದ ಸಹಕಾರ ಆಂದೋಲನ ಈಗಾಗಲೇ ಬೃಹತ್ ಮಟ್ಟದಲ್ಲಿ ಬೆಳವಣಿಗೆ ಹೊಂದಿದ್ದು, ಜನರ ನಿರೀಕ್ಷೆಗೆ ತಕ್ಕಂತೆ ಸಹಕಾರ ಕ್ಷೇತ್ರದಲ್ಲಿ ಕೆಲಸ ಸಾಗುತ್ತಿದೆಯೇ ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಅಭಿಪ್ರಾಯಪಟ್ಟರು.

ಅವರು ದಿನಾಂಕ : 18.8.2023 ರಂದು ಸಹಕಾರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಎಲ್ಲಾ ರೀತಿಯ ಸಹಕಾರ ಶೃಂಗಸಂಸ್ಥೆಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ಸಹಕಾರ ಸಂಸ್ಥೆಗಳ ಸಾಧನೆ, ವೈಫಲ್ಯಗಳ ಕುರಿತು ಅವಲೋಕನ ಮಾಡಿ ಮುಂದಿನ ದಿನಗಳಲ್ಲಿ ಎಲ್ಲ ವಲಯಗಳ ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಭೆಯನ್ನು ಆಯೋಜನೆ ಮಾಡಲಾಗಿದೆ. ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಸರ್ಕಾರದ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಕೆಲವು ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳಲ್ಲಿ ಕಂಡು ಬರುವ ಅವೈಜ್ಞಾನಿಕ ಸ್ಪರ್ಧೆಗಳು ಹಾಗೆಯೇ ಕೆಲವೊಂದು ಸಂಸ್ಥೆಗಳಲ್ಲಿ ಕಂಡುಬರುತ್ತಿರುವ ಆಡಳಿತಾತ್ಮಕ ಲೋಪದೋಷಗಳು ಸಮಗ್ರ ಸಹಕಾರ ಚಳವಳಿಯ ಮೇಲೆ ಪರಿಣಾಮ ಬೀರುತ್ತಿವೆ. ಈ ಕುರಿತು ಚಿಂತನ-ಮಂಥನ ನಡೆಯಬೇಕು. ಯುವಜನರಲ್ಲಿ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳಲು ಅರಿವು ಮೂಡಿಸಿ, ಯುವಜನತೆ ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಕ್ರಿಯಾಶೀಲರಾಗುವಂತೆ ನೋಡಿಕೊಳ್ಳಬೇಕು ಎಂದರು. ಹೊಸ ಆಯಾಮಗಳು, ಹೊಸ







ಪದ್ಧತಿಗಳು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಬಲ್ಲವು. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳಿಗೆ ವಿಮಾ ಪದ್ಧತಿ ಅಳವಡಿಕೆ ಕುರಿತು ಆಳವಾದ ಅಧ್ಯಯನ ನಡೆಸಲು ಸಲಹೆ ಮಾಡಿದರು.

ಜರ್ಮನಿಯಲ್ಲಿ ಇರುವಂತಹ ಈ ವಿಮಾ ಪದ್ಧತಿಯ ಅಧ್ಯಯನವನ್ನು ಹಿರಿಯ ಅಧಿಕಾರಿಗಳು ನಡೆಸಿ, ಅದನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡರೆ, ರಾಜ್ಯದ ಸಹಕಾರ ಚಳವಳಿಯ ಬಲಿಷ್ಠ ಬೆಳವಣಿಗೆಗೆ ಪೂರಕವಾಗುತ್ತದೆ ಎಂದು ಸಚಿವರು ತಿಳಿಸಿದರು.

ಯುವಜನತೆ ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಕ್ರಿಯಾಶೀಲರಾಗುವಂತೆ ನೋಡಿಕೊಳ್ಳಬೇಕು ಎಂದರು. ಹೊಸ ಆಯಾಮಗಳು, ಹೊಸ ಪದ್ಧತಿಗಳು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಬಲ್ಲವು. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳಿಗೆ ವಿಮಾ ಪದ್ಧತಿ ಅಳವಡಿಕೆ ಕುರಿತು ಆಳವಾದ ಅಧ್ಯಯನ ನಡೆಸಲು ಸಲಹೆ ಮಾಡಿದರು. ಜರ್ಮನಿಯಲ್ಲಿ ಇರುವಂತಹ ಈ ವಿಮಾ ಪದ್ಧತಿಯ ಅಧ್ಯಯನವನ್ನು ಹಿರಿಯ ಅಧಿಕಾರಿಗಳು ನಡೆಸಿ, ಅದನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡರೆ, ರಾಜ್ಯದ ಸಹಕಾರ ಚಳವಳಿಯ ಬಲಿಷ್ಠ ಬೆಳವಣಿಗೆಗೆ ಪೂರಕವಾಗುತ್ತದೆ ಎಂದು ಸಚಿವರು ತಿಳಿಸಿದರು.






# 2047ರ ವೇಳೆಗೆ ಭಾರತ ಶಕ್ತಿಶಾಲಿ ರಾಷ್ಟ್ರ
# ಸಹಕಾರ ಕ್ಷೇತ್ರದ ಬೆಳವಣಿಗೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ



**ನವದೆಹಲಿ :** 2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಬೇಕಾದರೆ, ಯಾವುದೇ ಪರಿಸ್ಥಿತಿಯಲ್ಲೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂಬ ದೃಢ ನಿರ್ಧಾರ ಅಗತ್ಯ. ಜೊತೆಗೆ ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ವಸ್ತುನಿಷ್ಠತೆಯೂ ಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 77ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಕೆಂಪು ಕೋಟೆಯ ಮೇಲೆ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಪಾರದರ್ಶಕ ಆಡಳಿತ ನೀಡುವ ಮೂಲಕ ಹಿಂದುಳಿದ ವರ್ಗಗಳು, ಪರಿಶಿಷ್ಟರು, ಬುಡಕಟ್ಟು ಜನರು, ಮಹಿಳೆಯರು ಹಾಗೂ ಆರ್ಥಿಕವಾಗಿ ಅಬಲರಾದ ಎಲ್ಲಾ ಜನರ ಅಭ್ಯುದಯ ಆಗಲಿದೆ ಎಂದ ಅವರು ಮಹಿಳೆಯರು ಮತ್ತು ಇತರೆ ಹಿಂದುಳಿದ ವರ್ಗಗಳ ಜನರ ಆರ್ಥಿಕ ಸ್ವಾವಲಂಬನೆಗೆ 15 ಸಾವಿರ ಕೋಟಿ ರೂ.ಗಳ ವಿಶ್ವಕರ್ಮ ಯೋಜನೆಯನ್ನು ಪ್ರಕಟಿಸಿದರು.

**ಸಹಕಾರಿ ಸಂಸ್ಥೆಗಳ ಪಾತ್ರ :** ಸಹಕಾರಿ ಕ್ಷೇತ್ರ ಮತ್ತು ಮಾನವೀಯತೆಗೆ ಅದರ ಇತ್ತೀಚಿನ ಕೊಡುಗೆಯಾದ ನ್ಯಾನೋ ಶ್ರೇಣಿಯ ರಸಗೊಬ್ಬರಗಳ ಮೇಲೆ ಒತ್ತು ನೀಡಿದರು. ದೇಶದ ಆರ್ಥಿಕತೆಯಲ್ಲಿ ಸಹಕಾರಿ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತಿದ್ದು, ಡ್ರೋನ್‌ಗಳ ಮೂಲಕ ನ್ಯಾನೋ ಯೂರಿಯಾ ಸಿಂಪಡಣೆಯು ಮಹತ್ವದ ಬದಲಾವಣೆ ತರಲಿದೆ ಎಂದು ಮೋದಿ ಹೇಳಿದರು.

15 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳಿಗೆ ಡ್ರೋನ್ ನಿರ್ವಹಣೆ, ದುರಸ್ತಿ ತರಬೇತಿ ನೀಡುವ ಯೋಜನೆ ಹಾಗೂ ನಗರಗಳಲ್ಲಿನ ಬಡ ಮತ್ತು ಮಧ್ಯಮವರ್ಗದ ಕುಟುಂಬಳಿಗಾಗಿ ವಸತಿ ಯೋಜನೆ ಜಾರಿಗೊಳಿಸುವ ತೀರ್ಮಾನಗಳ ಕುರಿತು ಪ್ರಧಾನಿಯವರು ಪ್ರಸ್ತಾಪಿಸಿದರು.

"ನಾವು ನಮ್ಮ ಕೃಷಿ ಚಟುವಟಿಕೆಗಳಿಗೆ ಡ್ರೋನ್ ಸೇವೆಗಳನ್ನು ಲಭ್ಯವಾಗುವಂತೆ ಮಾಡಲಿದ್ದೇವೆ. ಮೊದಲಿಗೆ, ನಾವು 15 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳನ್ನು ನಿರ್ಮಿಸುವ ಮೂಲಕ ಡ್ರೋನ್ ತರಬೇತಿ ಮಿಷನ್ ಅನ್ನು ಜಾರಿಗೆ ತರಲಿದ್ದೇವೆ ಎಂದು ಅವರು ಹೇಳಿದರು.

ಸಹಕಾರ ಸಂಸ್ಥೆಗಳನ್ನು ಬಲಪಡಿಸಲು, ಅವುಗಳನ್ನು ಆಧುನೀಕರಿಸಲು ಮತ್ತು ದೇಶದ ಮೂಲೆ ಮೂಲೆಗಳಲ್ಲಿ ಪ್ರಜಾಪ್ರಭುತ್ವದ ಅತಿದೊಡ್ಡ ಘಟಕವನ್ನು ಬಲಪಡಿಸಲು ಪ್ರತ್ಯೇಕ ಸಹಕಾರ ಸಚಿವಾಲಯವನ್ನು ರಚಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

ಸಹಕಾರ ಸಚಿವಾಲಯವು ದೇಶದಲ್ಲಿ ಸಹಕಾರಿ ಸಂಘಗಳ ವ್ಯಾಪ್ತಿಯನ್ನು ಹೆಚ್ಚಿಸುತ್ತಿದೆ. ಬಡ ವ್ಯಕ್ತಿಗಳ ಧ್ವನಿಯನ್ನು ಸಹ ಕೇಳಲಾಗುತ್ತದೆ, ಅವರ ಅಗತ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ಅವರೂ ಸಹ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಬಹುದು ಎಂದು ಪ್ರಧಾನಿ ಹೇಳಿದರು. ಭಾರತವು "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವುಳ್ಳ ಮಾರ್ಗವನ್ನು ಆರಿಸಿಕೊಂಡಿದೆ ಎಂದು ಅವರು ಒತ್ತಿ ಹೇಳಿದರು. ರೈತರಿಗೆ ಯೂರಿಯಾ ಸಬ್ಸಿಡಿಯಾಗಿ ಸರಕಾರ 10 ಲಕ್ಷ ಕೋಟಿ ರೂ. ಜಾಗತಿಕವಾಗಿ ಪ್ರತಿ ಚೀಲಕ್ಕೆ 3,000 ರೂಪಾಯಿ ಬೆಲೆಯ ಯೂರಿಯಾವನ್ನು ರೈತರಿಗೆ 300 ರೂಪಾಯಿಗಳ ಅಗ್ಗದ ದರದಲ್ಲಿ ನೀಡಲು, ಸರ್ಕಾರವು ಯೂರಿಯಾ ಸಬ್ಸಿಡಿಯಾಗಿ 10 ಲಕ್ಷ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ ಎಂದು ಪ್ರಧಾನಿಯವರು ನುಡಿದರು.

# 77ನೇ ಸ್ವಾತಂತ್ರ್ಯ ಸಂಭ್ರಮ : ಸಾಮರಸ್ಯ, ಸಹಬಾಳ್ವೆ, ಶಾಂತಿಯುತ ಸಮಾಜದಿಂದ ಅಭಿವೃದ್ಧಿ ಸಾಧ್ಯ : ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು:** ಸರ್ವ ಜನಾಂಗದ ಶಾಂತಿಯ ತೋಟ ಎಂಬ ಕುವೆಂಪು ಅವರ ಆಶಯವನ್ನು ಈಡೇರಿಸುವುದೇ ಸರ್ಕಾರದ ಪ್ರಧಾನ ಧ್ಯೇಯ. ವಿಚ್ಛಿದ್ರಕಾರಿ ಶಕ್ತಿಗಳ ಪ್ರಚೋದನೆಗೆ ಒಳಗಾಗದೇ ಸಾಮರಸ್ಯ, ಸಹಬಾಳ್ವೆಯ ಮಹತ್ವ ಎತ್ತಿ ಹಿಡಿಯಬೇಕು. ಶಾಂತಿಯುತ ಸಮಾಜದಿಂದ ಕರ್ನಾಟಕದ ಅಭಿವೃದ್ಧಿ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಗಸ್ಟ್ 15 ರಂದು ನಡೆದ ಸ್ವಾತಂತ್ರ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಭಾಷಣ ಮಾಡಿದರು.

'ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೆಯ ಸ್ಥಾನದಲ್ಲಿದ್ದು, ಪ್ರತಿವರ್ಷ ಸುಮಾರು ರೂ. 4 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಕೇಂದ್ರಕ್ಕೆ ಪಾವತಿಸುತ್ತಿದೆ. ಆದರೆ, ನಮಗೆ ವಾಪಸ್ ದೊರೆಯುತ್ತಿರುವುದು ರೂ. 50 ಸಾವಿರ ಕೋಟಿ ಮಾತ್ರ. ನ್ಯಾಯಯುತವಾಗಿ ದೊರೆಯುವ ಸಂಪನ್ಮೂಲಗಳು ಕೇಂದ್ರದಿಂದ ಮರಳಿ ಬಂದರೆ ನಮ್ಮದು ಅತ್ಯಂತ ಶ್ರೀಮಂತ ರಾಜ್ಯವಾಗಲಿದೆ' ಎಂದು ವಿವರಿಸಿದರು.

ಜನರ ಆರ್ಥಿಕ, ಸಾಮಾಜಿಕ ಚೈತನ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಸಾರ್ವತ್ರಿಕ ಮೂಲ ಆದಾಯ ಎನ್ನುವ ಹೊಸ ಆರ್ಥಿಕ ಪ್ರಮೇಯವನ್ನು ಅಳವಡಿಸಿಕೊಂಡು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ಪ್ರತಿಪಾದಿಸಿದರು. ಸ್ಥಗಿತಗೊಂಡಿರುವ ಕೃಷಿಭಾಗ್ಯ, ಅನುಗ್ರಹ ಯೋಜನೆ, ವಿದ್ಯಾಸಿರಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೇರಿದಂತೆ ಹಲವು ಯೋಜನೆಗಳನ್ನು ಮರುಜಾರಿ ಮಾಡಲಾಗುವುದು ಹಾಗೂ ಆಗಸ್ಟ್ 27ಕ್ಕೆ ಗೃಹಲಕ್ಷ್ಮಿ ಯೋಜನೆಯನ್ನು ಉದ್ಘಾಟಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.





ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಅಪೌಷ್ಠಿಕತೆ ಹೋಗಲಾಡಿಸಲು ವಾರಕ್ಕೆ ಎರಡು ದಿನ ಮೊಟ್ಟೆ ನೀಡಲಾಗುವುದು ಎಂದ ಅವರು, ಸರ್ಕಾರಿ ಬಸ್‌ಗಳಲ್ಲಿ ಟ್ರ್ಯಾಕಿಂಗ್ ಮತ್ತು ಪ್ಯಾನಿಕ್ ಬಟನ್ ವ್ಯವಸ್ಥೆಯನ್ನು ಶೀಘ್ರವೇ ಅಳವಡಿಸಲಾಗುವುದು ಎಂದರು.

ಇಂದಿರಾ ಕ್ಯಾಂಟೀನ್‌ಗಳನ್ನು ಮರು ಪ್ರಾರಂಭಿಸಲು 100 ಕೋಟಿ ರೂ. ಮೀಸಲು ಇಡಲಾಗಿದೆ. ಪ್ರತಿ ಪ್ಲೇಟ್ ತಿಂಡಿಗೆ 5 ರಿಂದ 10 ರೂ. ಹೆಚ್ಚುವರಿ ಮೊತ್ತ ನೀಡಿ ಜನರಿಗೆ ಹಿಂದಿನ ದರದಲ್ಲಿಯೇ ಉತ್ತಮ ಆಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸ್ವಾತಂತ್ರ್ಯೋತ್ಸವ ನಿಮಿತ್ತ ಆರಂಭದಲ್ಲಿ ಧ್ವಜ ವಂದನೆ ಸ್ವೀಕರಿಸಿದ ಮುಖ್ಯಮಂತ್ರಿಗಳು ನಂತರ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಬಿಬಿಎಂಪಿ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

... ಹಿಂದಿನ ಸಂಚಿಕೆಯಿಂದ

....ಹಿಂದಿನ ಸಂಚಿಕೆಯಿಂದ

**ಸಾಮಾನ್ಯ ನಿಕಾಯದ ಸಭೆಗಳು ಕಲಂ–27**

**ಸಾಮಾನ್ಯ ನಿಕಾಯ :** ಒಂದು ಸಹಕಾರ ಸಂಘದಲ್ಲಿರುವ ಎಲ್ಲ ಸದಸ್ಯರ ಸಮೂಹಕ್ಕೆ ಸಾಮಾನ್ಯ ನಿಕಾಯ ಎಂದು ಹೆಸರು. ಒಂದು ಸಹಕಾರ ಸಂಘದ ಪರಮಾಧಿಕಾರ ಈ ಸಾಮಾನ್ಯ ನಿಕಾಯದಲ್ಲಿ ಇರುತ್ತದೆ. ಆದರೆ ಈ ಪರಮಾಧಿಕಾರವು ಕಾಯಿದೆ, ನಿಯಮ ಮತ್ತು ಉಪನಿಯಮಗಳಿಗೆ ಒಳಪಟ್ಟಿರುತ್ತದೆ. ಸಾಮಾನ್ಯ ನಿಕಾಯದ ಸಭೆಗೆ ಮಹಾ ಸಭೆ ಎಂದು ಕರೆಯಲಾಗುತ್ತದೆ. ಒಂದು ಸಹಕಾರ ಸಂಘ ನೋಂದಣಿ ಆದ ತಕ್ಷಣ ನಡೆಯುವ ಮಹಾಸಭೆಗೆ, ಮೊದಲ ಮಹಾಸಭೆ ಎನ್ನಲಾಗುತ್ತದೆ. ಇದರಲ್ಲಿ ನೋಂದಣಿ ಆದ ಉಪನಿಯಮಗಳನ್ನು ದಾಖಲಿಸಲಾಗುತ್ತದೆ. ಪ್ರತಿ ಸಹಕಾರ ಸಂಘವೂ ವರ್ಷಕ್ಕೆ ಒಮ್ಮೆ, ಸೆಪ್ಟಂಬರ್ ತಿಂಗಳ 25ನೇ ತಾರೀಖಿಗೆ ಮುಂಚಿತವಾಗಿ, ಒಂದು ಮಹಾಸಭೆ ಕರೆಯಲೇ ಬೇಕು. ಇದಕ್ಕೆ ವಾರ್ಷಿಕ ಮಹಾಸಭೆ ಎಂದು ಹೆಸರು. ವಾರ್ಷಿಕ ಮಹಾಸಭೆ ನಡೆದಮೇಲೆ, ಕೆಲವು ಬಾರಿ ಮತ್ತೆ ಮಹಾಸಭೆ ಕರೆಯುವ ಅಗತ್ಯ ಬೀಳುವುದು ಉಂಟು. ಆಗ ಕರೆಯುವ ಮಹಾಸಭೆಗೆ ವಿಶೇಷ ಮಹಾಸಭೆ ಎಂದು ಹೆಸರು. ವಾರ್ಷಿಕ ಮಹಾಸಭೆಯಲ್ಲಿ ನಡೆಸುವ ಯಾವುದೇ ಕಾರ್ಯಕಲಾಪಗಳನ್ನು ವಿಶೇಷ ಮಹಾಸಭೆಯಲ್ಲೂ ನಡೆಸಬಹುದು. ಯಾವುದೇ ಮಹಾ ಸಭೆ ನಡೆಯಲು ಇರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯನ್ನು ನಿಗಧಿ ಪಡಿಸಲಾಗಿದೆ.ಇದಕ್ಕೆ ಕೋರಂ ಎಂದು ಹೆಸರು. ಯಾವುದೇ ಸಭೆ ನಡೆಸಲು ಇರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆಗೆ ಕೋರಂ ಎಂದು ಕರೆಯುತ್ತಾರೆ. ಕಾಯಿದೆಗೆ 2014ನೇ ವರ್ಷದಲ್ಲಿ ಆದ ತಿದ್ದುಪಡಿಯ ಪ್ರಕಾರ ಒಂದು ಸಾವಿರ ಸದಸ್ಯರು ಅಥವಾ ಸಂಘದ ಸದಸ್ಯರಲ್ಲಿ ಮತದಾನದ ಅರ್ಹತೆ ಇರುವ ಸದಸ್ಯರ ಶೇಕಡಾ 10 ರಷ್ಟು ಯಾವುದು ಕಡಿಮೆಯೋ ಅದು ಒಂದು ಮಹಾಸಭೆಗೆ ಕೋರಂ ಆಗಿರುತ್ತದೆ. ಒಂದು ಮಹಾಸಭೆ ನಡೆಯಬೇಕಾದರೆ ಮುಖ್ಯಕಾರ್ಯ ನಿರ್ವಹಣಾಧಿಕಾರಿಯು ಸಂಘದ ಎಲ್ಲಾ ಸದಸ್ಯರಿಗೂ ಕಡೆಯ ಪಕ್ಷ ಹದಿನೈದು ದಿನ ಮುಂಚಿತವಾಗಿ ನೋಟಿಸ್ ಕಳುಹಿಸಬೇಕು. ಈ ನೋಟಿಸ್‌ನಲ್ಲಿ ಸಭೆ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ನೋಟಿಸ್‌ನ ಜೊತೆಗೆ ಸಭೆಯ ವಿಷಯಗಳ ಕಾರ್ಯ ಸೂಚಿ ಮತ್ತು ಪ್ರತಿವಿಷಯಕ್ಕೂ ಸಂಕ್ಷಿಪ್ತ ಟಿಪ್ಪಣಿಗಳನ್ನು ಕಳಿಸಬೇಕು. ಇವೆಲ್ಲ ನಿಬಂಧನೆಗಳು ಎಲ್ಲ ರೀತಿಯ ಮಹಾಸಭೆಗಳಿಗೂ ಅನ್ವಯವಾಗುತ್ತವೆ. ಈ ನೋಟಿಸ್ ಅನ್ನು ಅಂಚೆ ಮೂಲಕ ಅಥವಾ ಇ–ಮೇಲ್ ಮೂಲಕ ಅಥವಾ ಸ್ವೀಕೃತಿ ಪಡೆದು ವೈಯುಕ್ತಿಕವಾಗಿ ನೀಡುವುದರ ಮೂಲಕ ಕಳುಹಿಸಬಹುದು. ಆದರೆ ಇದರ ಜೊತೆಗೆ ಒಂದು ಸ್ಥಳೀಯ ಪತ್ರಿಕೆಯಲ್ಲಿ ನೋಟಿಸ್ ಅನ್ನು ಮುದ್ರಿಸಿ ಪ್ರಕಟಿಸುವುದು ಕಡ್ಡಾಯವಾಗಿರುತ್ತದೆ. ವಾರ್ಷಿಕ ಮಹಾ ಸಭೆಯ ಕೆಲವು ಕರ್ತವ್ಯಗಳು ಕೆಳಗಿನಂತೆ ಇರುತ್ತವೆ:

1. ವಾರ್ಷಿಕ ಲೆಕ್ಕಪತ್ರಗಳನ್ನು (ಲಾಭ–ನಷ್ಟದ ತಃಖ್ತೆ, ಆಸ್ತಿ ಜವಾಬ್ದಾರಿ ತಃಖ್ತೆ ಮುಂತಾದವು) ಪರಿಶೀಲಿಸಿ ಅಂಗೀಕರಿಸುವುದು;
2. ಮುಂದಿನ ವರ್ಷದ ಕಾರ್ಯಕ್ರಮಗಳನ್ನು ಪರಿಶೀಲಿಸಿ ಅಂಗೀಕರಿಸುವುದು;
3. ಹಿಂದಿನ ವರ್ಷದ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು;
4. ಲೆಕ್ಕಪರಿಶೋಧಕರನ್ನು ಕಾಯಿದೆಯ ಪ್ರಕಾರ ನೇಮಿಸುವುದು;
5. ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು;
6. ಚುನಾವಣಾ ಫಲಿತಾಂಶದ ಘೋಷಣೆಗಳನ್ನು ದಾಖಲಿಸುವುದು;
7. ಲಾಭ ವಿಲೇವಾರಿ ಮಾಡುವುದು;

ಮುಂತಾದವುಗಳು ಕಡ್ಡಾಯವಾಗಿ ನಡೆಯಲೇ ಬೇಕಾಗಿರುತ್ತವೆ. ಅಗತ್ಯಕ್ಕೆ ತಕ್ಕಂತೆ ಇತರೆ ವಿಷಯಗಳೂ ಮಹಾ ಸಭೆಯ ಮೂಲಕ ಚರ್ಚೆ ಮತ್ತು ನಿರ್ಧಾರಕ್ಕಾಗಿ ಬರುತ್ತವೆ.

**ಸಹಕಾರ ಸಂಘಗಳ ಕಾರ್ಯನಿರ್ವಹಣೆ**

ಯಾವುದೇ ಸಹಕಾರ ಸಂಘದಲ್ಲಿ ಪರಮಾಧಿಕಾರವು ಕಾಯಿದೆ, ನಿಯಮ ಮತ್ತು ಉಪನಿಯಮಗಳಿಗೆ ಒಳಪಟ್ಟು, ಆಯಾ ಸಂಘದ ಮಹಾಸಭೆಗೆ ಇರುತ್ತದೆ. ಹೀಗೆಂದು ಕಾಯಿದೆಯ ಸೆಕ್ಷನ್ 26 ವಿಧಿಸಿರುತ್ತದೆ. ಪ್ರತಿ ಸಹಕಾರ ಸಂಘದಲ್ಲೂ ಅದರ ಉದ್ದೇಶ ಸಾಧನೆಗಾಗಿ ಆಡಳಿತವನ್ನು ನಡಸಲು ಒಂದು ಆಡಳಿತ ಮಂಡಳಿ ಇರಬೇಕೆಂದು ಕಾಯಿದೆ ವಿಧಿಸುತ್ತದೆ. ಈ ಆಡಳಿತ ಮಂಡಳಿಯನ್ನು ಸಂಘದ ಸದಸ್ಯರು ಚುನಾಯಿಸಬೇಕಾಗಿರುತ್ತದೆ. ಈ ಬಗ್ಗೆ ಸಂವಿಧಾನ ವಿಧಿಸಿರುವ ಒಂದು ಕಟ್ಟಳೆ ಎಂದರೆ ಪ್ರತಿ ಸಹಕಾರ ಸಂಘದ ಚುನಾವಣೆಗಳೂ ಕಾಯಿದೆಯ ಪ್ರಕಾರ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಒಂದು ಪ್ರಾಧಿಕಾರದ ಮೂಲಕವೇ ನಡೆಯಬೇಕು ಎಂದು. ಇದರಂತೆ ಕಾಯಿದೆಗೆ ತಿದ್ದುಪಡಿಮಾಡಿ ಕರ್ನಾಟಕ ಸರ್ಕಾರವು ಒಂದು ಸಹಕಾರಿ ಚುನಾವಣಾ ಪ್ರಾಧಿಕಾರವನ್ನು ಸ್ಥಾಪಿಸಿರುತ್ತದೆ. ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿಗೆ ಚುನಾವಣೆಗಳನ್ನು ಈ ಸಹಕಾರಿ ಚುನಾವಣಾ ಪ್ರಾಧಿಕಾರ ನಡೆಸುತ್ತದೆ. ನಂತರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಮುಂತಾದವರ ಚುನಾವಣೆಗಳು ಸಹಕಾರಿ ಚುನಾವಣಾ

ಪ್ರಾಧಿಕಾರದ ಮೇಲುಸ್ತುವಾರಿಯಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ನಡೆಯುತ್ತದೆ. ಆಡಳಿತ ಮಂಡಳಿಯ ಸದಸ್ಯರಿಗೆ ನಿರ್ದೇಶಕ ಎನ್ನುತ್ತಾರೆ. ನಿರ್ದೇಶಕರ ಕನಿಷ್ಠ ಸಂಖ್ಯೆ ಬಹಳ ವರ್ಷಗಳ ಕಾಲ 9 ಆಗಿತ್ತು. ಆದರೆ ಕಾಯಿದೆಗೆ 2014ರಲ್ಲಿ ಆದ ತಿದ್ದುಪಡಿಯ ಪ್ರಕಾರ ನಿರ್ದೇಶಕರ ಕನಿಷ್ಠ ಸಂಖ್ಯೆಯನ್ನು 13ಕ್ಕೆ ಏರಿಸಲಾಗಿದೆ. ಎಂದರೆ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲೂ ಕನಿಷ್ಠ 13 ಜನ ನಿರ್ದೇಶಕರು ಇರಬೇಕು. ಸರ್ಕಾರದಿಂದ ಧನ ಸಹಾಯ ಪಡೆದ ಸಂಘಗಳು ಸರ್ಕಾರದಿಂದ ಒಬ್ಬ ಪ್ರತಿನಿಧಿ (ನಾಮಿನಿ) ಆಡಳಿತ ಮಂಡಳಿಯಲ್ಲಿ ಇರುವಂತೆ ತಮ್ಮ ಉಪನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು. ಆಗ ಸರ್ಕಾರವು ಇಷ್ಟಪಟ್ಟಲ್ಲಿ ಒಬ್ಬ ಪ್ರತಿ ನಿಧಿಯನ್ನು ಸಂಘದ ಆಡಳಿತ ಮಂಡಳಿಗೆ ನಾಮ ನಿರ್ದೇಶನ ಮಾಡುತ್ತದೆ. ಇದಲ್ಲದೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಹಾಗೂ ಯಾವುದೇ ಹಣಕಾಸಿನ ಸಂಸ್ಥೆಯಿಂದ ಸಾಲ ಮುಂತಾದ ಧನ ಸಹಾಯವನ್ನು ಪಡೆದಿಲ್ಲದ ಸಹಕಾರ ಸಂಘಗಳನ್ನು ಹೊರತು ಪಡಿಸಿ ಮಿಕ್ಕೆಲ್ಲ ಸಹಕಾರ ಸಂಘಗಳೂ, ಅಗತ್ಯವಿದ್ದಲ್ಲಿ, ಆರ್ಥಿಕ ಸಂಸ್ಥೆಯ ಪ್ರತಿನಿಧಿ ಆಡಳಿತ ಮಂಡಳಿಯಲ್ಲಿ ಇರುವಂತೆ ತಮ್ಮ ಉಪನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು. ಸಂಘದ ಸ್ವರೂಪ, ಗಾತ್ರ ಇತ್ಯಾದಿಗಳನ್ನು ಅವಲಂಭಿಸಿ ಗರಿಷ್ಠ ಮಿತಿಯನ್ನು ಕಾಯಿದೆಯಲ್ಲಿ ವಿಧಿಸಲಾಗಿದೆ.ಒಂದು ಸಂಘದಲ್ಲಿ ಚುನಾಯಿತ ನಿರ್ದೇಶಕರ ಸಂಖ್ಯೆ 21 ನ್ನು ಮೀರುವಂತಿಲ್ಲ.

ಈ 21ರ ಗರಿಷ್ಠ ಮಿತಿಯನ್ನು ಸಂವಿಧಾನವೇ ವಿಧಿಸಿರುತ್ತದೆ. ಆಡಳಿತ ಮಂಡಳಿಯಲ್ಲಿ ಈ 13 ಜನ ನಿರ್ದೇಶಕರು ಮಾತ್ರವಲ್ಲದೆ. ಆಡಳಿತ ಮಂಡಳಿಯು ಸಹಮತದಿಂದ (ಕೋ–ಆಪ್ಷನ್) ಆರಿಸಿಕೊಂಡ ಇಬ್ಬರು ವೃತ್ತಿಸಹನಿರ್ದೇಶಕರಾಗಿ ಇರಬೇಕು. ಆದರೆ ಈ ಇಬ್ಬರಿಗೆ ಮತದಾನದ ಹಕ್ಕು ಹಾಗೂ ಸ್ಪರ್ಧಿಸುವ ಹಕ್ಕು ಇರುವುದಿಲ್ಲ ಮತ್ತು ಕೋರಂ ಲೆಕ್ಕಕ್ಕೆ ಬರುವುದಿಲ್ಲ. ಆರ್ಥಿಕ ಸಂಸ್ಥೆಯು ತನ್ನ ಪ್ರತಿನಿಧಿ – ನಾಮಿನಿಯನ್ನು ಕಳಿಸಲು ಬಯಸಿದಲ್ಲಿ, ಅದರ ನಿರ್ದೇಶಕ ಅಥವಾ ಅಧಿಕಾರಿಯನ್ನು ಪ್ರತಿನಿಧಿಯಾಗಿ ಕಳಿಸಬೇಕು. ಆದರೆ ಆರ್ಥಿಕ ಸಂಸ್ಥೆಯ ನಾಮಿನಿಗೆ ಮತದಾನದ ಹಕ್ಕು ಇದ್ದರೂ ಸಹ ಪದಾಧಿಕಾರಿ ಆಗುವ ಅರ್ಹತೆ ಇರುವುದಿಲ್ಲ. ಆಡಳಿತ ಮಂಡಳಿಯಲ್ಲಿ ಇವರೆಲ್ಲರ ಜೊತೆಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹ ಇರಬೇಕು. ಮುಖ್ಯ ನಿರ್ವಹಣಾಧಿಕಾರಿಗೆ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ. ಬಿಡಿ ಸದಸ್ಯರನ್ನು ಹೊಂದಿರುವ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಮೀಸಲಾತಿ ಇರಬೇಕು. ಪರಿಶಿಷ್ಟ ಜಾತಿ ಒಂದು ಸಹಕಾರ ಸಂಘದಲ್ಲಿ ಒಂದು ಸ್ಥಾನ, ಮಹಿಳೆಯರಿಗೆ ಎರಡು ಸ್ಥಾನ ಮತ್ತು ಹಿಂದುಳಿದ ವರ್ಗದವರಿಗೆ ಎರಡು ಸ್ಥಾನ – ಈ ರೀತಿ ಮೀಸಲಾತಿ ಇರುತ್ತದೆ. ಆಡಳಿತ ಮಂಡಳಿಯ ಅವಧಿ ಚುನಾವಣಾ ದಿನಾಂಕದಿಂದ 5 ವರ್ಷಗಳು. ಅಧ್ಯಕ್ಷ ಮುಂತಾದವರ ಅವಧಿ ಸಹ 5 ವರ್ಷಗಳು. ಅಧ್ಯಕ್ಷ ಮುಂತಾದವರ ಅವಧಿಯು ಆಡಳಿತ ಮಂಡಳಿಯ ಅವಧಿಯೊಂದಿಗೆ ಸಹ ವ್ಯಾಪ್ತವಾಗಿ (ಕೋಟರ್ಮಿನಸ್) ಇರುತ್ತದೆ; ಎಂದರೆ ಆಡಳಿತ ಮಂಡಳಿಯ ಅವಧಿ ಮುಗಿದ ಕೂಡಲೇ ಅವರುಗಳ ಅವಧಿಯೂ ಮುಗಿಯುತ್ತದೆ. ತನ್ನ ಅವಧಿ ಮುಗಿಯುವ ಆರು ತಿಂಗಳ ಪೂರ್ವದಲ್ಲೆ ಮುಂದಿನ ಆಡಳಿತ ಮಂಡಳಿಗೆ ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸಿ, ಸೂಕ್ತ ಏರ್ಪಾಡುಗಳನ್ನು ಮಾಡುವುದು ಆಡಳಿತ ಮಂಡಳಿಯ ಕರ್ತವ್ಯ. ಹೀಗೆ ಮಾಡಲು ಅವರು ವಿಫಲರಾದಲ್ಲಿ 5 ವರ್ಷಗಳ ಕಾಲ ಅವರು ನಿರ್ದೇಶಕರಾಗಲು ಅನರ್ಹರಾಗುತ್ತಾರೆ. ಆಗ ನಿಬಂಧಕರಿಂದ ನೇಮಕಗೊಂಡ ಒಬ್ಬ ಆಡಳಿತಾಧಿಕಾರಿಯು ಚುನಾವಣೆಗಳನ್ನು ಪ್ರಾಧಿಕಾರದ ಮೂಲಕ ನಡೆಸಲು ಏರ್ಪಾಡು ಮಾಡುತ್ತಾರೆ.

**ಕಾಯಿದೆಯಲ್ಲಿ ನಿರ್ದೇಶಕರಿಗೆ ಕೆಲವು ಅನರ್ಹತೆಗಳನ್ನು ವಿಧಿಸಲಾಗಿದೆ. ಅವೆಂದರೆ. ಕಲಂ–29ಸಿ**

1. ಯಾವುದೇ ಸಹಕಾರ ಸಂಘದಲ್ಲಿ ಸಾಲ ಪಡೆದು ಸುಸ್ತಿದಾರರಾಗಿದ್ದರೆ;
2. ಸಂಘದ ವ್ಯವಹಾರಗಳ ರೀತಿಯ ವ್ಯವಹಾರಗಳನ್ನು ಅವನು ನಡೆಸುತ್ತಿದ್ದರೆ;
3. ಸಂಘವು ಮಾಡಿಕೊಂಡ ಕರಾರುಗಳು, ಒಪ್ಪಂದಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಆಸಕ್ತನಾಗಿದ್ದರೆ:
4. ಸಂಘದ ವಕೀಲನಾಗಿದ್ದರೆ ಅಥವಾ ಸಂಘದ ವಿರುದ್ಧವಾಗಿ ವಕೀಲನಾದರೆ;
5. ಸಂಘದ ಸಂಬಳದಾರ ನೌಕರನಾಗಿದ್ದರೆ;
6. ಸಂಘದ ಸಂಬಳದಾರ ನೌಕರನ ಹತ್ತಿರದ ಸಂಬಂಧಿಯಾಗಿದ್ದರೆ ಇತ್ಯಾದಿ.

ಈ ಪಟ್ಟಿಯು ದೊಡ್ಡದಾಗಿದ್ದು ಕಾಯಿದೆಯ ಸೆಕ್ಷನ್ 29ಸಿ ನಲ್ಲಿ ನೋಡಬಹುದು, ಸಂಘಗಳು ಇನ್ನೊಂದು ಸಂಘದ ಸದಸ್ಯ ಆಗಿರುವಾಗ, ಸದಸ್ಯ ಸಂಘಕ್ಕೂ ಅನರ್ಹತೆಗಳನ್ನು ನಿಗಧಿಪಡಿಸಲಾಗಿದೆ. ಯಾವುದೇ ನಿರ್ದೇಶಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಬಯಸಿದಲ್ಲಿ, ಅದಕ್ಕೆ ವಿಧಾನವನ್ನು ಕಾಯಿದೆಯಲ್ಲಿ ನೀಡಲಾಗಿದೆ. ಹೀಗೆ ರಾಜಿನಾಮೆ ಅಥವಾ ಸಾವು ಅಥವಾ ಇನ್ನಾವುದೇ ಕಾರಣದಿಂದ ಖಾಲಿಸ್ಥಾನ ಉಂಟಾದಾಗ ಅದನ್ನು – ಆಡಳಿತ ಮಂಡಳಿಯ ಉಳಿದಿರುವ ಅವಧಿಯನ್ನು ಅವಲಂಭಿಸಿ – ಆಡಳಿತ ಮಂಡಳಿ ಅಥವಾ ಸಹಕಾರಿ ಚುನಾವಣಾ ಪ್ರಾಧಿಕಾರ ಭರ್ತಿ ಮಾಡಬೇಕಾಗಿರುತ್ತದೆ.ಇದಕ್ಕೆ ವಿಧಾನವನ್ನು ಕಾಯಿದೆಯಲ್ಲಿ ವಿವರವಾಗಿ ವಿಧಿಸಲಾಗಿದೆ.

ಮುಂದುವರೆಯುವುದು...